Members Representation.

†ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ನಾನು ಹೋದ ಅಧಿವೇಶನದಲ್ಲಿ ಕೊಟ್ಟಿರತಕ್ಕಂಥ ಅನೇಕ ಪ್ರಶ್ನೆಗಳಿಗೆ ಉತ್ತರಬರಲಿಲ್ಲ. ಅವುಗಳಿಗೆ ಉತ್ತರಗಳನ್ನು ತರಿಸುತ್ತೇನೆಂದು ಸ್ಪೀಕರ್ ರವರು ಹೇಳಿದ್ದರು. ಆದರೂ ಉತ್ತರ ಬರಲಿಲ್ಲ. ನಾನು ಕೊಟ್ಟಿರತಕ್ಕಂಥ ಪ್ರಶ್ನೆಗಳಿಗೆ ಉತ್ತರ ಬರುವ ಸ್ಥಿತಿಯೂ ಕಂಡುಬರುವುದಿಲ್ಲ. ಉತ್ತರ ಕೊಡುತ್ತಾರೆಯೇ ಕೊಡುವುದಿಲ್ಲವೇ! ಇದರ ಮೇರೆ ಹೋದಸಾರಿಕೊಡುತ್ತೇವೆಂದುಹೇಳಿ. ಕೊಡದಿದ್ದಕ್ಕೋಸ್ಕರ ನಮ್ಮ ಅಸೆಂಬ್ಲಿ ಮೆಂಬರುಗಳ ಹಕ್ಕಿಗೆ ಧಕ್ಕೆಬಂದಿದೆ. ಸ್ಪೀಕರ್‌ರವರು ನಮ್ಮಿಂದ ಚುನಾಯಿತರಾಗಿರುತ್ತಾರೆ. ಆರೀತಿ ಕೊಡುತ್ತೇವೆಂದು ಹೇಳಿ, ಕೊಡದೆ ಇದ್ದರು ಸಹಿತ. ನಮ್ಮನ್ನೆ ಕೂತುಕೊಂಡಿರುವುದಕ್ಕೆ ನಮಗೆ ಸಾಧ್ಯವಿಲ್ಲವೆಂದು ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಪ್ರಶ್ನೆ ಕೇಳಿದರೆ, ಉತ್ತರ ಕೊಡತಕ್ಕಂಥಾದ್ದು ಅವರ ಕರ್ತವ್ಯ ಉತ್ತರ ತೆಗೆದುಕೊಳ್ಳುವುದು ನಮ್ಮ ಹಕ್ಕು ಆ ಹಕ್ಕಿಗೆ ಧಕ್ಕೆ ಬಂದಿದೆ. ಉತ್ತರ ಕೊಡದೆಹೋದರೆ ಅಸೆಂಬ್ಲಿ ಸದಸ್ಯರ ಹಕ್ಕಿಗೆ ಧಕ್ಕೆಬಂದಿದೆ. ಮತ್ತು ಬರುತ್ತದೆಂದು ಭಾವಿಸಬೇಕು. ಆದ್ದರಿಂದ ಈ ವಿಚಾರದಲ್ಲಿ ತಾವು ಅಸೆಂಬ್ಲಿ ಮೆಂಬರುಗಳ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು ಮತ್ತು ಈಗ ನಾವು ಕೊಟ್ಟಿರತಕ್ಕಂಥ 10 ಪ್ರಶ್ನೆಗಳಿಗೆ ಉತ್ತರ ತರಿಸಿಕೊಡಬೇಕು, ಅವುಗಳಲ್ಲಿ 2 ಪ್ರಶ್ನೆಗಳನ್ನು unstared ಮಾಡಿದ್ದಾರೆ ಇನ್ನು ಎಂಟಕ್ಕು ಸರ್ಕಾರದ ಉತ್ತರ ಬರುವ ಸ್ಥಿತಿಇಲ್ಲ, ಇನ್ನು ಆರು ಪ್ರಶ್ನೆಗಳಿಗೆ ಉತ್ತರ ಬರಲಿಲ್ಲ. ಈಗರಾದರು ಉತ್ತರ ಕೊಡುವುದಕ್ಕೆ ಹೇಳಬೇಕು. ಒರಲ್ಲಾಗಿ ಉತ್ತರ ಕೊಡತಕ್ಕಂಥ ಅವಕಾಶ ಇರಬೇಕು. ಇದನ್ನು ತೀರ್ಮಾನ ಮಾಡಬೇಕು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಾನು ರೆಪ್ರೆಸೆಂಟೇಶನ್ ಕೊಟ್ಟು ಎಂಟುದಿನವಾಗಿದೆ. ನಾನು ಕಾನೂನಿಗೆ ವಿರುದ್ಧವಾಗಿ ಮಾತನಾಡುವುದಿಲ್ಲ. ಅದುವಿವಾದಾಸ್ಪದವಾದದ್ದೇನೂ ಅಲ್ಲ ಪುನರ್ವಿಮರ್ಶಿತ ನಂಬಳ ಸಾರಿಗೆಗಳ ವಿಷಯದ ಚರ್ಚೆಗೆ ಒಂದು ದಿವಸ ಅವಕಾಶಮಾಡಿಕೊಡಬೇಕೆಂದು ತಮ್ಮ ಹತ್ತಿರ ಮನವಿ ಸಲ್ಲಿಸಿದ್ದೇನೆ.

ಅಧ್ಯಕ್ಷರು.—ಅದು ಬಂದಿದೆ, ನೋಡೋಣ. ಕೆಂಚಪ್ಪನವರು ತಮ್ಮ ಪ್ರಶ್ನೆಗೆ ಉತ್ತರ ಬರುವುದಿಲ್ಲವೆಂದು ಹೇಳುತ್ತಿದ್ದಾರೆ ಯಾರಿಂದಲೂ ಆ ತರಹ ತಕರಾರು ಬಂದಿಲ್ಲ. ಅವರದು ಏತಕ್ಕೆ ಹಾಗಾಗುತ್ತಿದೆ? ಹೋದ ಅಧಿವೇಶನಕ್ಕೆ ಕಳುಹಿಸಿದ್ದ ಪ್ರಶ್ನೆಗಳೆಲ್ಲ ಈಗ ವಾಯಿದೆ ಕಳೆದು ಗತಿಸಿ ಹೋಗಿವೆ. ಹೀಗೆ ಗತಿಸಿಹೋಗಿರತಕ್ಕ ಪ್ರಶ್ನೆಗಳಿಗೆ ಸರ್ಕಾರದಿಂದ ಏನಾದರು ಉತ್ತರ ಬಂದಲ್ಲ ಆಪ್ರಶ್ನೆಗಳನ್ನು ಟೇಬಲ್‌ಮೇಲಡರಾಗುತ್ತದೆ ಹಾಗೂ ಎಲ್ಲಾ ಸದಸ್ಯರಿಗೂ ಹಂಚಿನ ರಾಗುತ್ತದೆ. ಆದರೆ ಇನ್ನು ಈ ಅಧಿವೇಶನಕ್ಕೆ ಸಂಬಂದಪಟ್ಟ ಹಾಗೆ ಕಳುಹಿಸಿರುವ ಪ್ರಶ್ನೆಗಳೇನಿವೆ ಅವುಗಳ ಬಗ್ಗೆ ನಾನು ಮತೊಮ್ಮೆ ವಿಚಾರಮಾಡುತ್ತೇನೆ.

ಶ್ರೀ ಕೆ. ಕೆಂಚಪ್ಪ.—ಇದು ಸದಸ್ಯರುಗಳಿಗಿರತಕ್ಕ ಹಕ್ಕಿನ ಒಂದು ಪ್ರಶ್ನೆಯಾಗಿದೆ. ಸರ್ಕಾರದವರು ನಮ್ಮ ಈ ಹಕ್ಕನ್ನು ಇಷ್ಟು ಸುಲಭವಾಗಿ ಕಳೆಯುವುದಕ್ಕೆ ಸಾಧ್ಯವಿಲ್ಲ ಈ ವಿಚಾರವನು ನಾನು ಅಧ್ಯಕ್ಷರಲ್ಲಿ ಬಹಳ ದಿವಸಗಳಿಂದಲೂ ಕೇಳಿ ಕೇಳ್ಳುತ್ತಲೇ ಇದ್ದೇನೆ. ಇದಕ್ಕೆ ಅಧ್ಯಕ್ಷರು ಒಂದು ತಕ್ಕ ರಕ್ಷಣೆಯನ್ನು ನಮಗೆ ಕೊಡಬೇಕಾಗಿದೆ. ನಮ್ಮ ಮೈಸೂರು ದೇಶವೊಂದನ್ನು ಬಿಟ್ಟರೆ ಬೇರೆ ಇನ್ನೆಲ್ಲೂ ಇಂಥ ತಾತ್ಸಾರಕ್ಕೆ ಅವಕಾಶವಿಲ್ಲ, ಇದ್ದಿದ್ದರೆ ಅಲ್ಲಿ ಈ ವಿಚಾರದಲ್ಲೇ ಅವಿಶ್ವಾಸ ನಿರ್ಣಯವನ್ನು ಆ ಸಭೆಗಳಲ್ಲಿ ಅವರು ತರುತ್ತಿದ್ದರು ಅದಕ್ಕಾಗಿ ಬೇರೆ ಶಾಸನ ಸಭೆಗಳಲ್ಲಿ ಸದಸ್ಯರ ಪ್ರಶ್ನೆಗಳಿಗೆಲ್ಲ ಸಕಾಲದಲ್ಲಿ ಉತ್ತರಗಳು ಬರುತ್ತವೆ. ಈ ವಿಚಾರದಲ್ಲಿ ಅನೇಕ ಸಾರಿ ಅಧ್ಯಕ್ಷರು ಸರ್ಕಾರದವರ ಗಮನವನ್ನು ಸೆಳೆದಿದ್ದಾಗ್ಗೂ ಅವರ ಮಾತಿಗೆ ಏನುಗೌರವ ದೊರೆತಂತೆ ಕಾಣುತ್ತಿಲ್ಲ ಹೀಗಾಗಿ ಈ ದಿವಸ ಈ ಸಭೆಯ ಅಧ್ಯಕ್ಷರ ಹಾಗು ಸದಸ್ಯರ ಗೌರವಗಳಿಗೆ ಧಕ್ಕೆ ಬಂದಂತಾಗಿದೆ.

Sri K. PUTTASWAMY.—On a point of personal explanation, if you will kindly permit me, I want to offer an explanation with regard to Q. No. 193 which was held over today.

ಅಧ್ಯಕ್ಷರು.—ಈಗ ಆ ಪ್ರಶ್ನೆಯಾಗಲೇ ಮುಗಿದುಹೋಗಿದೆ. ಆ ಪ್ರಶ್ನೆ ಪುನಾ ಈಗ ಹೇಗೆ ಬರುತ್ತದೆ ? ನಾನು ಈ ವಿಚಾರದಲ್ಲಿ ನಿಮಗೆ ಸಂಪೂರ್ಣ ವಿವರಗಳನ್ನು ತಿಳಿಸುತ್ತೇನೆಕೇಳಿ. ಮುಂದೆ ಈ ವಿಷಯ ಚರ್ಚೆಗೆ ತೆಗೆದುಕೊಳ್ಳುವ ಕಾಲದಲ್ಲಿ ನಮಗೆ ಮಾತನಾಡಲು ಅವಕಾಶ ಕೊಡುತ್ತೇನೆ. ಆದರೆ ಈಗ ಆ ಪ್ರಶ್ನೆ ಮುಗಿದಿರುವಾಗ ಏಕೆ ಎತ್ತುತ್ತೀರಿ ?

Sri K. PUTTASWAMY.—During the question-hour I do not think you will be permitting me to give a personal explanation. It may not be appropriate.

Mr. SPEAKER.—Why not, it would be appropriate. It is at the discretion of the Chair.

Sri K. PUTTASWAMY.—It becomes difficult for me to find out an opportunity to give my personal explanation.

Mr. SPEAKER.—I will allow him in opportunity at the time it is taken up. I am going to help him in finding a *via meida*. When this question is taken up, I will allow him personal explanation.

Sri K. PUTTASWAMY.—My personal explanation does not relate to the question as such. If you kindly permit me, I will be able to put forward my view.

Mr. SPEAKER.—But the trouble is, about 8 other Members will be standing similarly. If I allow, I should allow them. If he is so insistent, I allow. But let it not be taken as a precedent.

Sri K. PUTTASWAMY.—If you do not permit me, I do not speak at all. Some point of order was raised and a discussion was permitted on that point of order, to some extent. So, I stood up. At this stage, the Speaker was pleased to say that he would consider and he would not permit any discussion because that w uld result in losing time. The Speaker was pleased to say that he would consider the matter and give his ruling. I was not anxious to participate in that discussion. Sir, what I failed to understand was, that discussion having been permitted when I stood up to speak,.....

Mr. SPEAKER.—The issue is h ld over. I allowed him to speak and I heard his point of order. After hearing the point of order, I said that I had not made up my mind and I said I would give my ruling afterwards, after having heard him.

Sri K. PUTTASWAMY.—I am very happy that the Speaker reserved his ruling and said that he would not permit discussion on the point of order during the question hour.

Mr. SPEAKER.—This is something which is very very new. This is not a personal explanation, but this is an explanation of my intentions, It is not his personal explanation.

ಶ್ರೀ ಕೆ. ಕೆಂಡಪ್ಪ.—ನಾನು ಕೇಳುತ್ತಿರುವುದರಿಂದ ನನ್ನ ಒಬ್ಬನ ಪ್ರಶ್ನೆಯಲ್ಲ. ಅನೇಕ ಸದಸ್ಯರ ಪ್ರಶ್ನೆಗಳಿಗೆಲ್ಲ ಉತ್ತರವೇ ಬಂದಿಲ್ಲ. ಈ ವಿಚಾರದಲ್ಲಿ ಅಧ್ಯಕ್ಷರು ನಮಗಿರತಕ್ಕ ಹಕ್ಕನ್ನು ರಕ್ಷಣೆ ಮಾಡಿಕೊಡಬೇಕಾಗಿದೆ.

Mr. SPEAKER.—I will look into it and inform him.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ)—. ಸ್ವಾಮಿ ನನ್ನದೊಂದು ಅರಿಕೆ ಇದೆ...

ಅಧ್ಯಕ್ಷರು.—ಈ ದಿವಸದ ಕಾರ್ಯಕಲಾಪಗಳ ಸಂಬಂಧವಾಗಿದ್ದರೆ ಹೇಳಿ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈ ದಿವಸದ ಕಾರ್ಯಕಲಾಪಗಳ ವಿಚಾರದಲ್ಲಿ ಈ ಮನೂದೆಗಳನ್ನೆಲ್ಲಾ ಈ ಒಂದು ದಿವಸದಲ್ಲೇ ಚರ್ಚೆಮಾಡಿ ಮುಗಿಸಲು ಸಾಧ್ಯವಿಲ್ಲ.

ಅಧ್ಯಕ್ಷರು.—ಹಾಗೆ ಉಳಿಯುವ ಕಾರ್ಯಕ್ರಮ ಮುಂದಿನ ದಿವಸಕ್ಕೆ ಹೋಗುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಾಳೆ ಬಡ್ಜೆಟ್ ಪ್ರೆಸೆಂಟೇಷನ್, ನಾಡದ್ದು ರಜ. ಈ ದಿವಸ 3 ಗಂಟೆಗಳ ಕಾಲದಲ್ಲಿ ಅಂದರೆ 1 ಗಂಟೆ, 1¼ಗಂಟೆ ಮತ್ತು 1¾ ಗಂಟೆಗಳ ಕಾಲದಲ್ಲಿ ಈ ದಿವಸದ 3 ಬಿಲ್ಲುಗಳ ಚರ್ಚೆ ಮುಗಿಯಲು ಸಾಧ್ಯವಿಲ್ಲ. ನಾಲ್ಕನೇದು ದೊಡ್ಡಬಿಲ್ಲು. ಇದಕ್ಕೆ 2½ ಗಂಟೆ ಆದರು ಸಾಲದು, ಆದುದರಿಂದ ಈ ನಾಲ್ಕನೇ ಬಿಲ್ಲನ್ನು ಮುಂದಿನ ದಿವಸಕ್ಕೆ ಹಾಕಲು ಸಾಧ್ಯವೇ ಎಂತ ಕೇಳಲು ನಿಂತಿವ್ವೇನೆ. ಇದು ಅನೇಕರಿಗಿರುವ ಅಭಿಪ್ರಾಯ.

PAPERS LAID ON THE TABLE

Sri T. SURRAMANYA (Minister for Development and Local Self-Government).—Sir, I beg to lay on the Table Notification No. DRL 40 RPA dated 9th February 1961 (Amendment to the Mysore Panchayats and Taluk Boards Election Rules, 1959) as required under section 246 of the Mysore Village Panchayats and Local Boards Act, 1959.

MYSORE APPROPRIATION BILL, 1961.—*Introduction*

Sri T. MARIAPPA.—(Minisiter for Finance).—Sir, I beg to introduce the Mysore Appropriation Bill, 1961.

Mr. SPEAKER.—The Mysore Appropriation Bill, 1961, is introduced.

Motion to Consider

Sri T. MARIAPPA.—I beg to move

"That the Mysore Appropriation Bill, 1961, be taken into consideration."

Mr. SPEAKER.—Motion moved :

"That the Mysore Appropriation Bill, 1961, be taken into consideration."

Sri B. K. PUTTARAMIYA.—Sri, I want to say a few words.

Mr. SPEAKER.—You want to consider this.

Sri B. K. PUTTARAMIYA.—The Chair is correct. I know that there is a convention, but in spite of that the circumstances have forced me to speak a few words, not a lengthy speech. I know that we should not discuss.